Regd No. M 1299

॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥

ಜಡಿ ಸಂಚಿಕೆ ೬ ಪೈಸೆ

ಸತ್ಯವಾದಿ

ವರ್ಷಕ್ಕೆ ರೂ. 1—0—0 ಸ್ಥಳಕ್ಕೆ

(ಮೈಸೂರು ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತಪಾದುದು)

ಪ್ರತಿ ಬುಧವಾರ ಪ್ರಕಟಿಸಲ್ಪಡುವದು

ವರ್ಷಕ್ಕೆ ರೂ. 1—10—0 ಪರಸ್ಥಳಕ್ಕೆ

ಸಂಪುಟ 19] ಮೈಸೂರು, 19 ನೆ ಆಗಸ್ಟ್ 1936 [ಸಂಚಿಕೆ 38

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೌನ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ, ಉಪ್ಪು) 9 ಪೈ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೌನ್ಸ್—ಸೀಮೆಯಿಂದ ಬರುವ ಟೂತ್‌ಪೌಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳಪ್ಪವನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ತಕ್ಕರ) ಆಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಛಂದಾವರ್ತಿಪರಿಕ್ಷಿಸಿ ನೋಡಬೇಕಾದ್ದು. ಟಿ 1 ಕ್ಕೆ 5 ಆಣೆ.]

[ಪರಾ—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷ ಕೊಡಲ್ಪಡುವುದು. ನಮ್ಮಲ್ಲಿ ಎಲ್ಲಾನಿದೆವಾದ ಆಯುರ್ವೇದೀಯ ಮಹೌಷಧಗಳೂ ತಯ್ಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್
ಎಸ್. ಎನ್. ಪಂಡಿತ್ ಅಂಡ್ ಸನ್ಸ್

ಅಡ್ರೆಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೧೦ ಅಲ್ಬರ್ಟ್ ಬಿಲ್ಡಿಂಗ್ಸ್, ಮೈಸೂರು

Manufg Chemists Druggists & Physician

THE
Indian Naturopath

A Monthly Health Magazine,
expounding the Philosophy of Naturism
and the Several Systems of
Nature Cure

Annual Subscription Rs. 1—8—0

A unique medium for Advertisements

For further particulars apply to—
The Editor "Indian Naturopath"
Bezwada.

H. S. KAMAL SHERIFF, DENTIST

Lansdowne Buildings, Mysore

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfaction.

5 p. c. CASH CERTIFICATES

Three Years Cash Certificates are issued by the Head Office and Branches of THE QUILON BANK, LTD., subject to following main terms—

1. If the depositor allows the amount to remain with the Bank till due date, he will be earning compound interest at 5 p.c. per annum with half-yearly rests and will receive as per particulars given below:

Rs.	50	for every Rs.	43—2—6	deposited by him.
Rs.	100	do	Rs. 86—5—0	do.
Rs.	500	do	Rs. 431—9—0	do.
Rs.	1,000	do	Rs. 863—2—0	do.

2. In case of withdrawals before maturity amounts as spcified on the reverse of the certificate will be paid.

For further information write to or call at any of the 32 offices of

THE QUILON BANK

(Incorporated in Travancore, 1919 Member, Reserve Bank of India)

Alleppey	Ernakulam	Madras	Shertallay
Allwaye	Erode	Madura	Tenkasi
Bangalore Cantt.	Hyderabad	Mount Road	Tinnevelly Jn.
Bangalore City	Jaffna	Mysore	Tinnevely Town
Chirayinkil	Kayamkulam	Nagarcoil	Trichinopoly
Cochin	Kandy	Quilon	Trivandrum
Coimbatore	Karaikudi	Royapettah	Tuticorin
Coonoor	Kottayam	Secunderabad	Vellore

ಮಲೆನಾಡಿನ ಮಾತು

"ಆಚಾರಕ್ಕೊಂದು ಆಯ್ತು,
ಸುಖಕ್ಕೊಂದು ಆಯ್ತು"

ಈಗಿನ ನಮ್ಮ ವೈಸರಾಯರು ಹೊಡಿತ್ತಿರುವ ರಾಗವೇ ಬೇರೆ. ಹಿಂದೆ ಯಾವ ವೈಸರಾಯರೂ ಈ ರಾಗ ಹಾಡಿರಲಿಲ್ಲ. ಇವರು ಎಲ್ಲಿ ಹೋದರೂ ಗೂಳಿ, ಎತ್ತು, ಹಾಲು, ಮೊಸರು, ಬೆಣ್ಣೆ, ತುಪ್ಪ, ಕೃಷಿ, ವ್ಯವಸಾಯ, ಇದೇ ಅವರ ಪಲ್ಲವಿ. ಎಲ್ಲಿಗೆ ಹೋದರೂ, ಯಾರನ್ನು ನೋಡಿದರೂ, ಈ ಪಲ್ಲವಿಗೆ ತಾಳ ಹಾಕೋದೆ. ಗೂಳಿ ರಾಗ, ಕೃಷಿ ಪಲ್ಲವಿ. ಹಾಲು ತುಪ್ಪ ಕೀರ್ತನೆ. ಇದನ್ನು ಕೇಳಿ ಕೇಳಿ ಸಾಕಾಗಿಹೋಯ್ತು.

೦ ೦

ಭರತಖಂಡದಲ್ಲಿರೋದೆಲ್ಲಾ ಕೃಷಿ, ವ್ಯವಸಾಯ ಇದು ನಮ್ಮ ವೈಸರಾಯರಿಗೆ ಜೆನ್ನಾಗಿ ಗೊತ್ತು. ಹಿಂದೆ ಒಂದು ವ್ಯವಸಾಯ ವಿಚಾರಣಾ ಕಮಿಟಿಯನ್ನು ತೆಗೆದುಕೊಂಡು ಅವರು ಇಲ್ಲಿಗೆ ಬಂದಿದ್ದರು. ಆಗ ಅವರಿಗೆಲ್ಲಾ ಗೊತ್ತಾಗಿದೆ. ಇಂಡಿಯಾ ವ್ಯವಸಾಯಗಾರರ ಜೀವಾಳ. ಅದ್ದರಿಂದಲೇ ಈ ಹೊಸ ರಾಗ ಹಾಡುವುದಕ್ಕೆ ಪ್ರಾರಂಭಿಸಿದ್ದಾರೆ.

೦ ೦

ಇದೂ ಒಂದು ಒಳ್ಳೆಯ ಉಪಾಯವೇ ಸಂಶಯವಿಲ್ಲ. ಈ ಕಡೆ ಕಾಂಗ್ರೆಸ್ಸಿನವರು ಗಾಂಧಿಮಹಾತ್ಮನು ಜೀವನ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಕಾಂಗ್ರೆಸ್ಸಿನ ಕಡೆ ಜನಗಳ ದೃಷ್ಟಿ ಹೋದ್ದಹಾಗೂ ಆಯ್ತು. ಅದ್ದರಿಂದಲೇ ಈ ವ್ಯವಸಾಯ ಗೂಳಿಗಳ ಹೊಸ ಪಲ್ಲವಿ ರಾಗಗಳು.

೦ ೦

ವ್ಯವಸಾಯಗಾರರೇನೋ ಇಂಡಿಯಾದಲ್ಲಿ ತುಂಬಾ ಇದ್ದಾರೆ. ಆದರೆ ಕೈಗಾರಿಕೆಯವರು ಇಲ್ಲವೇ? ಅದರ ಮಾತೇ ಇಲ್ಲ ವೈಸರಾಯರ ಜಾಯಲ್ಲಿ. ಕೈಗಾರಿಕೆ ರಾಗ ಹಾಡಿದರೆ ಬ್ರಿಟಿಷರಿಗೆ ಸೊನ್ನೆ ಬರುತ್ತೆ. ಅವರೆಲ್ಲಾ ಹೊಟ್ಟೇ ಮೇಲೆ ಒದ್ದೆ ಒಟ್ಟೆ ಹಾಕಿಕೊಂಡು ಅಂಗತನ ಮಲಗಿಕೊಳ್ಳಬೇಕಾಗುತ್ತೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತು. ಅದರಿಂದಲೇ ಕೈಗಾರಿಕೆ ರಾಗವನ್ನು ಬಿಟ್ಟೇಬಿಟ್ಟಿದ್ದಾರೆ. ರೈತರೆಲ್ಲಾ ಉತ್ತು ಬಿತ್ತು ವರ್ಷವೆಲ್ಲಾ ಕಷ್ಟಪಟ್ಟು ಸಂಪಾದಿಸಿದ ದವಸಧಾನ್ಯಗಳನ್ನು ಕೊಟ್ಟು ಪರದೇಶದ ಗಾಜು ಪಿಂಗಾಣಿಗಳನ್ನೆಲ್ಲಾ ಕೊಂಡುಕೊಳ್ಳೋದು ತಪ್ಪಿಹೋಗೋದಿಲ್ಲವೇ? ಅಷ್ಟು ದೂರ ಅಲೋಚನೆ ಮಾಡೋಕೆ ತಿಳಿಯುವದಿಲ್ಲವಾದರೆ ಅವರನ್ನು ವೈಸರಾಯರನ್ನಾಗಿ ಇಲ್ಲಿಗೆ ಯಾರು ಕಳುಹಿಸುತ್ತಿದ್ದರು? ಅಂತು ಕೃಷಿ ವ್ಯವಸಾಯವೆಲ್ಲಾ ಉತ್ತರ ಗೊಳ್ಳಬೇಕು.

೦ ೦

ಇನ್ನೂ ಒಂದು ವಿಷಯ. ಜನಗಳಿಗೆ ಬೇಕಾದ್ದೇನು? ಊಟಮಾಡೋದಕ್ಕೆ ಒಂದಿಷ್ಟು ಅನ್ನ,

ಗೃಹಸ್ಥರು ಅರಿಯುತಕ್ಕ ವಿಷಯಗಳು

ಹಲಸಿನ ಹಣ್ಣಿನಿಂದ ಉಂಟಾದ ಅಜೀರ್ಣವನ್ನು ಬಾಳೇಹಣ್ಣು ನಿವಾರಣೆ ಮಾಡುವುದು.

ಬಾಳೇಹಣ್ಣಿನಿಂದ ಉಂಟಾದ ಅಜೀರ್ಣವನ್ನು ಅಕಳು ತುಪ್ಪವು ನಿವಾರಣೆ ಮಾಡುವುದು.

ಘೃತಸರಿಪಾಕಕ್ಕೆ ನಿಂಬೇಹಣ್ಣು ಸಹಕಾರಿ.

ಕೊಬ್ಬರಿಯಿಂದ ಆದ ಅಜೀರ್ಣವನ್ನು ಹುರಿದ ಅಕ್ಕಿಯು ಪರಿಹರಿಸುವುದು.

ಮಾವಿನ ಹಣ್ಣಿನಿಂದಾದ ಅಜೀರ್ಣಕ್ಕೆ ಹಾಲು ಪುದ್ದಾಗಿ ಪರಿಣಮಿಸುತ್ತದೆ. (ಯು. ನಾ.)

೦ ೦

ಮಜ್ಜಿಗೆಯು ಅನೇಕ ವ್ಯಾಧಿಗಳಿಗೆ ಗುಣಕಾರಿಯಾಗಿದೆ. ಆದರೆ ಶ್ರಾವಣ ಮಾಸದಲ್ಲಿ ಮಾತ್ರ ಮಜ್ಜಿಗೆಯನ್ನು ಕುಡಿಯದೇ ಇರುವುದು ಒಳ್ಳೇದು.

೦ ೦

ಆಹಾರದೊಂದಿಗೆ ಸ್ವಲ್ಪ ನಿಂಬೇಹಣ್ಣಿನ ರಸವನ್ನು ಸೇರಿಸಿಕೊಳ್ಳುವುದು ಅವಶ್ಯಕವೆಂದು ಡಾ॥ ಮಾಕ್ಸ್‌ವೆಲ್‌ರವರು ತಿಳಿಸಿರುವರು. ಇದರಿಂದ ಆರೋಗ್ಯವು ಹೆಚ್ಚುವುದಲ್ಲದೆ ವ್ಯಾಧಿಗಳೂ ನಿವಾರಣೆಯಾಗುವುವೆಂದು ಹೇಳಿರುವರು.

ಕುಡಿಯೋದಕ್ಕೆ ಒಂದಿಷ್ಟು ಹಾಲು, ಇನ್ನೇನು ಬೇಕು? ಇಷ್ಟಿದ್ದರೆ ಯಾರು ತೈಪ್ತಿಪಡೋದಿಲ್ಲ, ನಿಜ. ಆದರೆ ನೀವೂ ಕೊಂಚಹೊತ್ತು ಯೋಚನೆ ಮಾಡಿ ನೋಡಿರಿ.

೦ ೦

ಹಟ್ಟಿಯಲ್ಲಿ ಕಟ್ಟಿದ ಎಮ್ಮೆ ಎತ್ತುಗಳಿಗೆ ಹೊಟ್ಟಿತೆ ರಂಬಾ ಆಹಾರ ಹಾಕೋದಿಲ್ಲವೆ? ಹಂದಿನಾಯಿಗ ಒ ಹೊಟ್ಟಿ ತುಂಬಿಸಿಕೊಳ್ಳುವದಿಲ್ಲವೋ? ಜೈಲಿನಲ್ಲಿರುವ ಕೈದಿಗಳು ಅನ್ನ ತಿರದ ಕೊಂಡು ಒಂದೀ ಖಾನೆಯಲ್ಲಿ ಬಿದ್ದಕೊಂಡು ಒದುಕುವುಲ್ಲವೆ? ಭಾರತೀಯರು ಅವರಂತೆ ಆಗಬೇಕು ಅಂತೀರಾ? ನಮ್ಮ ಅವಸ್ಥೆ ಅದಕ್ಕಿಂತಲೂ ಏನು ಹೆಚ್ಚಿದೆ? ಯಾರಾದರೂ ಹೇಳಿರಿ. ನೋಡೋಣ. ಒಂದುಕಡೆಯಿಂದ ಇನ್ನೊಂದು ಕಡೆ ಹೋಗೋದಕ್ಕೆ ನಿರ್ಬಂಧ. ಪಸ್ಸಿಗೆ ತೋರಿದ ನ್ಯಾಯವನ್ನು ಬಾಯಿಂದ ಉಚ್ಚರಿಸುವುದಕ್ಕೆ ನಿರ್ಬಂಧ. ಬೇಕಾದುದನ್ನು ಬೇಕು ಅನ್ನಕೂಡದು ಬೇಡವಾದ್ದನ್ನು ಬೇಡ ಅನ್ನಕೂಡದು. ತಪ್ಪುವಾಡಿದರೆ ತಪ್ಪು ಅನ್ನಕೂಡದು. ಒಳ್ಳೇದುಮಾಡಿದರೆ ಒಳ್ಳೇದು ಅನ್ನಕೂಡದು. ಈತರದ ಗುಲಾಮಗಿರಿಯಲ್ಲಿ ಹಾಲನ್ನು ಉಂಡು ಪ್ರಾಣಧಾರಣೆ ಮಾಡಿದರೆ ಅದೂ ಒಂದು ಬದುಕೇ? ಒಳೇ?

ವೈಸರಾಯರ ಈ ಗೂಳಿ ವ್ಯವಸಾಯದ ವಿಧಾನವನ್ನು ಬೇಕಾದಷ್ಟು ಮಂದಿ ಹೊಗಳಬಹುದು. ಅದರೆ ನನಗೆ ಮಾತ್ರ ಅದೇನು ಸಖವಿಲ್ಲ ಅನ್ನಿಸುತ್ತೆ. ಅಂತು ಭಾರತೀಯರಿಗೆ ಕೊಂಚ ತಲೆಸುತ್ತು ಕಷ್ಟು ದಾರಿ ನಟ್ಟಗೆ ಮಾಡಿಕೊಳ್ಳೋದೇ ಬ್ರಿಟಿಷರ ಉಪಾಯ, ಅದೇ ನಿಜ ಅನ್ನಿ. "ಮಲ್ಲ"

ಅಬ್ಸೀನಿಯಾದ ಕೆಲವು ವಿಷಯಗಳು

ಜಿಬೂಟಿಯಿಂದ ಅಡ್ಡಿಸ್ ಅಬಾಬಿಗೆ ದಾರಿ ಇದ್ದರೂ ರೈಲು ಹೋಗಿಬರುವುದು ವಾ ಎರಡು ಬಾರಿ ವಾತ್ರ. ಅದೂ ಅಷ್ಟೇ ಹೊ ಹೋಗಿ ಬರಬೇಕೆಂಬ ನಿಬಂಧನೆಯೂ ಇಲ್ಲ. ಧಿಗೆ ಕಾಲವನ್ನು ಗೊತ್ತುಮಾಡಿದ್ದರೂ ಒಂದೊ ಬಾರಿ ೪ ಕಾಲಕ್ಕೆ ಮುಂಚೆಯೂ ಹೊರಡುವ ಈ ರೈಲ್ವೆಯು ಫ್ರೆಂಚರಿಗೆ ಸೇರಿದ್ದು. ಜಿಬೂಟಿ ಸಾಧಾರಣವಾಗಿ ವಾಯುಗುಣವು ಗಂಭೀರವಿರುತ್ತದೆ. ಶೀತದೇಶೀಯರಿಗೆ ಅದು "ಒಲೆ" ಎ ಹೇಳಬಹುದು.

ಜಿಬೂಟಿಯಿಂದ ಅಡ್ಡಿಸ್ ಅಬಾಬಿಗೆ ಪ್ರಯಾಣವು ಮೂರು ದಿವಸ ಹಿಡಿಯುತ್ತದೆ. ದರೆ ರಾತ್ರೀಕಾಲದಲ್ಲಿ ರೈಲು ಹೋಗುವುದಿಲ್ಲ.

ಇತಿಯೋಪಿಯಾ ಸೈನ್ಯಕ್ಕೆ ಆಗಲಿ ಅಥವಾ ರಿಗಾಗಲಿ ವೈದ್ಯಚಿಕಿತ್ಸೆಗಾಗಿ ಹೆಚ್ಚು ಮಂದಿ ಡರುಗಳಿರಲಿಲ್ಲ. ಒಬ್ಬ ನೇಟಿವ್ ವೈದ್ಯನು ಈ ದೇಶದ ಚಿಕಿತ್ಸಕನಾಗಿದ್ದನು. ಡಾಕ್ಟರುಗಳು ಹೆಗಲ್ಲದಿದ್ದುದರಿಂದ ಅವರ ಆರೋಗ್ಯವು ಜೆನ್ನಾಗಿತ್ತು.

ಅಬ್ಸೀನಿಯಾಕ್ಕೆ ಆದಾಯವು ಮುಖ್ಯವಾ ಕಾಫಿ ಮತ್ತು ಆಡಿನ ಚರ್ಮ ಇವುಗಳಿಂದ ಬರುತ್ತದೆ. ಚಕ್ರವರ್ತಿಯ ಗೌರ್ನರುಗಳಿಗೆ ಸ್ಥಾಬಳಿಗೆಗಳು ಇರಲಿಲ್ಲ.

ಅಬ್ಸೀನಿಯಾವು ಹೊರದೇಶೀಯರಿಗೆ ಕರೆದುಬಂದರೂ ಅಲ್ಲಿ ನಿರುದ್ಯೋಗತ್ವವೆಂಬ ಇಲ್ಲವೇ ಇಲ್ಲ. ಇಂದಿಗೂ ಯಾರೂ ಹೊಟ್ಟಗೊಟ್ಟಿಯಿಲ್ಲದೆ ಸಾಯುತ್ತಿಲ್ಲ.

ಇನ್ನು ಮುಂದೆ ಸ್ವನಾಗರೀಕತೆಯು ಇಟಲಿಯವರ ಮೂಲಕ ಹೆಚ್ಚಬೇಕಲ್ಲವೆ? ಆಗ ನೋಡೋಣ, ಹೇಗಾಗುವದೋ? ನಾಗರೀಕತೆಯು ಹೆಚ್ಚಿದಂತೆಲ್ಲಾ ದಾರಿದ್ರ್ಯವು ಹೆಚ್ಚುವದೇ ಹೊರತು ಕಡಮೆಯಾಗುವುದಿಲ್ಲವೆಂದು ಅನೇಕರ ಭಾವನೆ.

ಅಬ್ಸೀನಿಯವಲ್ಲದೆ ಆಫ್ರಿಕಾದಲ್ಲಿನ ಇನ್ನೂ ಒಂದು ದೇಶವು ಆ ದೇಶೀಯರ ಸ್ವಾಧೀನದಲ್ಲಿರುತ್ತದೆ. ಅದನ್ನು ಯಾರು ನುಂಗಲಿಚ್ಛಿಸುವರೋ ನೋಡಬೇಕಾಗಿದೆ!

೧೩ನೇ ಶತಮಾನದಲ್ಲಿ ನಡೆದ ಒಂದು ಮಹಾ ಒಪ್ಪಂದವು ಒಂದಾನೊಂದು ಮಠದ ಮಂದಿರದಲ್ಲಿ ದಸ್ತವೇಜಾಗಿ ಮಾಡಲ್ಪಟ್ಟ ರುಜುಮಾಡಲ್ಪಟ್ಟಿತು. ಈಗ ಅದೇ ಮಂದಿರದಲ್ಲಿ ಡಾರ್ಡನೆಲ್ಸ್ ಒಪ್ಪಂದವು ನಡೆಯಬೇಕಾಗಿತ್ತು. ಆದರೆ ಅಷ್ಟು ದಿವಸಗಳಿಂದಲೂ ಇಂತಹ ರಾಜಕೀಯ ವಿಷಯಗಳಿಗೆ ಉಪಯೋಗವಾಗದ ಈ ಮಂದಿರದಲ್ಲಿ ಒಪ್ಪಂದಕ್ಕೆ ರುಜುಮಾಡಿದರೆ ಏನಾದರೂ ತೊಂದರೆಯಾದೀತೆಂದು ಎಲ್ಲರೂ ಭಯಪಡುತ್ತಿದ್ದರು. ಇದಕ್ಕೆ ಮುಖ್ಯ ಕಾರಣ, ಆಗ ನಡೆದ ಒಪ್ಪಂದಗಾರರೆಲ್ಲರೂ ಕಾರಣಾಂತರಗಳಿಂದ ಗಲ್ಲಿಗೇರಿಸಲ್ಪಟ್ಟಿದ್ದರು! ಆದ್ದರಿಂದ ಕಡೆಯ ಹೊತ್ತಿಲ್ಲಿ ಬೇರೆ ಸ್ಥಳಕ್ಕೆ ಹೋಗಿ ಅಲ್ಲಿ ರುಜು ಮಾಡಿದರು!

ಶಕ್ತಿಸಾಧನೆಯ ಸುಲಭೋಪಾಯಗಳು.

ಶಕ್ತಿಯುಂ ಆರೋಗ್ಯವೂ ಪರಸ್ಪರ ಸಂಬಂಧವಿರುವ ಎರಡು ತತ್ವಗಳು. ಆರೋಗ್ಯವಿಲ್ಲದೇ ಶಕ್ತಿಯು ಹೆಚ್ಚಲಾರದು. ಶಕ್ತಿಯು ಇಲ್ಲದಿದ್ದರೆ ಆರೋಗ್ಯವಿರುವ ಸಂಭವವೂ ಕಡಮೆ. ಅದ್ದರಿಂದ ಮನುಷ್ಯನಿಗೆ ಶರೀರದಲ್ಲಿ ಆರೋಗ್ಯವೂ ಶಕ್ತಿಯೂ ಅತಿ ಮುಖ್ಯವಾದುವು ; ಇವೆರಡೂ ಇದ್ದಲ್ಲಿ ಮನುಷ್ಯನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಮಾಡಬಲ್ಲನು.

ಹಣವನ್ನು ಸಂಪಾದಿಸುವದಕ್ಕಾಗಿ ದುಡಿಯಬೇಕಾದರೆ ಶಕ್ತಿಯೂ ಆರೋಗ್ಯವೂ ಇಲ್ಲದೆ ಸಾಧ್ಯವಿಲ್ಲ. ಪಾರಮಾರ್ಥಿಕ ದೃಷ್ಟಿಯಿಂದ ನೋಡಿದರೂ ವ್ರತ, ನಿಯಮ, ಭಗವದ್ಧ್ಯಾನ, ಯೋಗಾಭ್ಯಾಸಾದಿಗಳನ್ನು ಮಾಡಿ ಮೋಕ್ಷವನ್ನು ಹೊಂದುವುದಕ್ಕೂ ಶಕ್ತಿಯು ಅತ್ಯಗತ್ಯವಾದುದು. ಸಾಂಸಾರಿಕ ರೀತಿಯಿಂದ ಇಹಲೋಕ ಸುಖಾಪೇಕ್ಷಿಗಳಾದವರಿಗೆ ತಮ್ಮ ಇಚ್ಛಿತವಾದ ವಿಷಯ ಸುಖಾದಿಗಳ ಉಪಭೋಗಕ್ಕಂತೂ ಸಂಪೂರ್ಣವಾಗಿ ಶಕ್ತಿಯು ಇರಲೇಬೇಕು. ಮಾನವನಿಗೆ ಅದೊಂದು ಜೀವನದ ತತ್ವವಾದ ಶಕ್ತಿಯು ಯಾರಿಗೆ ಬೇಡ ? ಎಲ್ಲರಿಗೂ ಬೇಕೇಬೇಕು. ವಿದ್ಯಾರ್ಥಿಗಳಿಗೆ ತಾವು ಕಲಿತ ಪಾಠಗಳನ್ನು ಜ್ಞಾಪಕದಲ್ಲಿ ನಿಲ್ಲುವಂತೆ ಮಾಡುವುದು ಶಕ್ತಿ ! ಯುವಕ ಯುವತಿಯರಿಗೆ ತಮ್ಮ ಯೌವನದ ಪ್ರಯೋಜನವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡುವುದು ಶಕ್ತಿ. ವೃದ್ಧರಿಗೂ ಕೂಡ ಶರೀರವು ದೃಢವಾಗಿ ಬಲಹೀನತೆ ಇಲ್ಲದಂತೆ ಕಾಪಾಡುವುದೂ ಶಕ್ತಿ ! ಸಂಗೀತಗಾರರು ತಮ್ಮ ಮನೋಧರ್ಮವನ್ನು ಯಥಾಸ್ಥಿತಿಯಾಗಿ ವ್ಯಕ್ತಪಡಿಸಿ ತಮ್ಮ ವಿದ್ಯೆಯ ಸಾಮರ್ಥ್ಯವನ್ನು ಸಭಿಕರಿಗೆ ತೋರುವಂತೆ ಮಾಡಲು ಶಾರೀರವು ಏಕರೀತಿಯಲ್ಲಿರುವಂತೆ ಮಾಡುವುದು ಶಕ್ತಿ ! ದೇಶದೇಶಾಂತರಗಳಲ್ಲಿ ಪ್ರಯಾಣಮಾಡುವ ವ್ಯಾಪಾರಸ್ಥರೇ ಮೊದಲಾದವರ ಆರೋಗ್ಯವು ಕೆಡದಂತೆ ಮಾಡುವುದೂ ಶಕ್ತಿಯೇ ! ಹೆಚ್ಚೇಕೆ --ಮನುಷ್ಯ ಮಾತ್ರದವರಿಗೆ ಯಾವ ವಿಧದಿಂದ ನೋಡಿದರೂ ಶಕ್ತಿಯು ಅವಶ್ಯಕವು.

ಶಕ್ತಿಯಿದ್ದವನಿಗೆ ಎಲ್ಲವೂ ಸಾಧ್ಯವು. ಶಕ್ತಿಯ ದೆಸೆಯಿಂದ ಭಾರತದಲ್ಲಿ ಮಹಾವೀರನೆಂದು ಪ್ರಸಿದ್ಧಿಪಡೆದ ಅರ್ಜುನನು ಪರಮೇಶ್ವರನೊಡನೆ ಯುದ್ಧಮಾಡಿ ಅತನನ್ನು ಒಲಿಸಿಕೊಂಡನು. ಶಕ್ತಿಯ ದೆಸೆಯಿಂದಲೇ ಭೀಮನು ಅತ್ಯಂತ ಪರಾಕ್ರಮಶಾಲಿಗಳಾದ ಜರಾಸಂಧ ದುರ್ಯೋಧನಾದಿಗಳನ್ನು ಗೆದ್ದನು. ಶಕ್ತಿಯೇ ಹನುಮಂತನಿಗೆ ಬಲಾಢ್ಯನೆಂಬ ಕೀರ್ತಿಯನ್ನು ತಂದಂಥಾದ್ದು. ರಾವಣ ಹಿರಣ್ಯಾಕ್ಷ ಮೊದಲಾದವರು ದೇವತೆಗಳನ್ನು ಕೂಡ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಹಾಯಮಾಡಿದುದೂ ಶಕ್ತಿಯೇ ! ಶಕ್ತಿಯ ದೆಸೆಯಿಂದ ನೆಪೋಲಿಯನನು ಪ್ರಪಂಚವನ್ನೇ ಗೆಲ್ಲುವ ಸಾಹಸಿಯೆಂದು ಖ್ಯಾತಿಗೊಂಡಿದ್ದು. ಮೈಸೂರು ಹುಲಿ ಎಂದು ಪ್ರಸಿದ್ಧನಾದ ಟಿಪ್ಪೂಸುಲ್ತಾನನ ಕೀರ್ತಿಗೂ ಶಕ್ತಿಯೇ ಮೂಲಕಾರಣವಲ್ಲವೇ ?

ಇಂತಹ ಅದ್ಭುತವಾದ ಮತ್ತು ಅಸಾಧಾರಣವಾದ ಮಹಿಮೆಯುಳ್ಳದ್ದು ಶಕ್ತಿಯು. ಶಕ್ತಿವಂತರಾಗಿಯೂ, ಆರೋಗ್ಯವಂತರಾಗಿಯೂ ಇರಬೇಕೆಂಬ ಆಶೆಯು ಪ್ರತಿಯೊಬ್ಬರಿಗೂ ಉಂಟಾಗುವುದು ಸಹಜವಷ್ಟೆ. ಪೂರ್ಣ ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುವುದಕ್ಕೆ ನಮ್ಮ ಸುಪ್ರಸಿದ್ಧವಾದ ವನ್ನು ಸೇವಿಸಿರಿ. ಇದರ ಸೇವನೆಯು ನಿಮ್ಮನ್ನು ಆರೋಗ್ಯವಂತರಾಗಿಯೂ ವಜ್ರಕಾಯಕರನ್ನಾಗಿಯೂ ಮಾಡುವುದು. ಇದು ಪಾಶ್ಚೀಸ್ತ್ಯವೈದ್ಯಗ್ರಂಥಗಳ ಶೋಧನೆಯಿಂದ ತಯಾರಿಸಲ್ಪಟ್ಟಿದೆ. ಅನೇಕರು ಇದನ್ನು ಸೇವನೆಮಾಡಿ ತುಂಬಾ ಪ್ರಯೋಜನಹೊಂದಿ ಪ್ರಶಂಸಿಸಿರುತ್ತಾರೆ. ಇದರ ಶ್ರೇಷ್ಠತೆಯ ಸಲುವಾಗಿ ಅನೇಕ ವಸ್ತುಪ್ರದರ್ಶನಗಳಲ್ಲಿ ಮೆಡಲುಗಳೂ, ಸರ್ಟಿಫಿಕೇಟುಗಳೂ ಬಂದಿರುತ್ತವೆ. ಯಾವ ಮತಾಚಾರಕ್ಕೂ ವಿರುದ್ಧವಿಲ್ಲದ, ಕೇವಲ ಶಕ್ತಿವರ್ಧಕ ಮತ್ತು ಪೌಷ್ಟಿಕಗುಣಗಳುಳ್ಳ ಅಮೋಘ ವನಸ್ಪತಿಗಳಿಂದ ತಯಾರಾದುದು. ಇದರಲ್ಲಿ ಅಪಾಯಕರವಾದ ಯಾವ ವಸ್ತುವೂ ಇಲ್ಲ.

ಶಕ್ತಿಸುಧೆಯನ್ನು ಸೇವಿಸುವ ಕಾಲದಲ್ಲಿ ಆಹಾರ ಪಾನೀಯ ನಿಯಮವಾಗಲೀ, ಕಠಿಣ ಪಥ್ಯವಾಗಲಿ ಇಲ್ಲ. ಸರ್ವಸಾಧಾರಣ ಆರೋಗ್ಯ ನಿಯಮಗಳನ್ನು ಅನುಸರಿಸಿದರೆ ಸಾಕು ; ಯುಕ್ತ ಗುಣವು ಸ್ವಲ್ಪ ಕಾಲದಲ್ಲಿಯೇ ಕಂಡು ಬರುವುದು.

ಸತ್ಯವಾದಿ

ವಾರಪತ್ರಿಕೆಯನ್ನು ಓದಿ ಆನಂದಿಸಿರಿ

ವಿವಿಧ ವಿಚಾರಗಳಿಂದ ವಿರಾಜಿಸುತ್ತದೆ.

ತಾತ್ಕಾಲಿಕ ಉಪಯುಕ್ತ, ಮತ್ತು ದೇಶಹಿತದೃಷ್ಟಿಯುಕ್ತವಾದ
ಅನೇಕಾನೇಕ ವಿಷಯಗಳನ್ನೂ,

ರಸವತ್ತಾದ ಕಥೆಗಳನ್ನೂ, ಹಾಸ್ಯಲಹರಿಯನ್ನೂ,

ದೇಶ ವಿದೇಶ ವರ್ತಮಾನಗಳನ್ನೂ ಒಳಗೊಂಡಿರುತ್ತದೆ.

ಸನಾತನಧರ್ಮವಿಚಾರಗಳು ಪ್ರಕಟಿಸಲ್ಪಡುವುವು.

ವಾರ್ಷಿಕ ಚಂದ

ಸ್ಥಳಕ್ಕೆ 1—0—0
ಅಂಚೆವೆಚ್ಚ ಸೇರಿ) ಪರಸ್ಥಳಕ್ಕೆ 1—10—0 ಬಿಡಿ ಪ್ರತಿ ೩ ಪೈ

ನಮ್ಮಲ್ಲಿ ಎಲ್ಲಾ ವಿಧವಾದ ಮುದ್ರಣ ಕೆಲಸಗಳೂ ಸುಲಭ ಛಾರ್ಜಿಗೆ ಸಕಾಲಕ್ಕೆ ಮಾಡಿಕೊಡಲ್ಪಡುತ್ತವೆ.

ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು.

ಶಕ್ತಿಸುಧಾ

ಬಾಲ್ಯದಲ್ಲಿ ಅವಿಚಾರದ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "ಶಕ್ತಿಸುಧೆ" ಯು ನವತೇಜಸ್ಸನ್ನೂ ಬಲಶುಷ್ಟಿ ಪುಷ್ಟಿಯನ್ನೂ ಉಂಟುಮಾಡುತ್ತದೆ. ಇದು ಸಕಲ ವಿಧವಾದ ಧಾತುವಿಕಾರಗಳಿಗೆ ರಾಮಬಾಣವು

ಸಹಜವಾದ ಅಶಕ್ತತೆಯಿಂದಾಗಲೀ, ವಯೋಧರ್ಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊಂದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "ಶಕ್ತಿಸುಧೆ" ಯು ನವಚೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯಮಾಡುತ್ತದೆ.

"ಶಕ್ತಿಸುಧೆ" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟುಮಾಡುವುದು. ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆದಿಯಾಸವಿಲ್ಲದಂತೆ ಮಾಡುವಂತೆ ಉತ್ಸಾಹವನ್ನು ತಂದುಕೊಡುತ್ತದೆ.

ಸ್ತ್ರೀಯರು ಮುಟ್ಟಾಗುವ ಕಾಲದಲ್ಲಿ ಬರುವ ಸೊಂಟನೋವು, ಹೊಟ್ಟೆನೋವು, ಆಕಸ್ಮಿಕಶೂಲವನ್ನೂ, ನಿಶಕ್ತಿಯನ್ನೂ ಗುಣಪಡಿಸಿ ಅವರ ಸ್ವಾಭಾವಿಕವಾದ ಸೌಂದರ್ಯವನ್ನು ವೃದ್ಧಿಮಾಡುವುದು.

ವಿದ್ಯಾರ್ಥಿಗಳು ಪಾಠಗಳನ್ನು ಚೆನ್ನಾಗಿ ಕಲಿಯುವದಕ್ಕೂ, ಕಲಿತುದನ್ನು ಮರೆತುಹೋಗದಂತಹ ಜ್ಞಾಪಕಶಕ್ತಿಯಿರುವಂತೆ ಮೆದುಳಿಗೆ ಶಕ್ತಿಯನ್ನು ಕೊಡುವುದಕ್ಕೂ "ಶಕ್ತಿಸುಧೆ" ಯು ವರಪ್ರಸಾದವು

ಅಜೀರ್ಣ, ಅಗ್ನಿಮಾಂದ್ಯ, ಮಲಬದ್ಧತೆ, ಇತ್ಯಾದಿ ಸಾಮಾನ್ಯ ಖಾಯಿಲೆಗಳು ಈ "ಶಕ್ತಿಸುಧೆ" ಯನ್ನು ಉಪಯೋಗಿಸುವವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವದರಲ್ಲಿ ಅಮೃತಪಾಯವಾದ "ಶಕ್ತಿಸುಧೆ" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಒಂದು ರೂಪಾಯಿ. ಟಿ. ಖ. ಬೇರೆ. ಚಿಕ್ಕ ಡಬ್ಬಿ 4 ಆಣೆ

ಏಳಿಸಿ:— ಸತ್ಯವಾದಿ ಬಿಲ್ಡಿಂಗ್ಸ್, ಮೈಸೂರು

Weekly Newspaper

SATYAVADI

Every Wednesday

MYSORE (Founded 1917) 19—8—36

'Satyavadi' Missing Letters Competition 3

WIN Rs. 100

Key Solution Deposited With The Quilon Bank Ltd., Mysore.

Last day of Entry	Entrance Fee for each Entry	Result on
25—9—36	4 Annas	30—9—36

ರೂ. 100 ಬಹುಮಾನ

ಪ್ರವೇಶದನ ನಾಲ್ಕಾಣೆ ಮಾತ್ರ

ಒಂದನೆಯ ಬಹುಮಾನ ೫೦ ರೂಪಾಯಿ ಎಂಡನೆಯ ಬಹುಮಾನ ೨೫ ರೂಪಾಯಿ
ಮೂರನೆಯ ಬಹುಮಾನ ೧೫ ,, ಸ್ಪೆಷಲ್ ಬಹುಮಾನ ೧೦ ,,

ಮೊದಲನೆಯ ಸರಿಯಾದ ಉತ್ತರಕ್ಕೆ ೧೦ ರೂ. ಬಾಳುವ ಬೆಳ್ಳಿಯ ಬಟ್ಟಲು !

ಕೆಳಗೆ ಕೊಟ್ಟಿರುವ ಐದು ಪದಗಳಲ್ಲಿ ಬಿಟ್ಟಿರುವ ಅಕ್ಷರಗಳನ್ನ ಜೋಡಿಸಬೇಕು.

ನಮ್ಮ ಉತ್ತರವನ್ನು ಮೈಸೂರಿನಲ್ಲಿರುವ ಕ್ವಿಲೊನ್ ಬ್ಯಾಂಕಿನಲ್ಲಿಟ್ಟಿರುವೆವು.

ಈ ಫಾರಂನಲ್ಲಿ ಅಥವಾ ಬೇರೆ ಕಾಗದದಲ್ಲಿ ಉತ್ತರವನ್ನೂ, ಹೆಸರು ವಿಳಾಸವನ್ನೂ ಸ್ಪಷ್ಟವಾಗಿ ಬರೆದು ಕಳುಹಿಸಬೇಕು.

	ಜೋಡಿಸಬೇಕಾದ ಪದಗಳು	ಸೂಚನೆ
1	ಅ —	ಪ್ರಿಯ ಬಂಧು
2	— ಪು	ಆಹಾರ ಪದಾರ್ಥ
3	— ಂಗಳೂರು	ದಕ್ಷಿಣ ಇಂಡಿಯಾದ ಪ್ರಸಿದ್ಧ ಪಟ್ಟಣ
4	— ಲ	ಮರದ ಹೆಸರು
5	— ಣ್ಣ	ಮನೆಯ ಅಲಂಕಾರಕ್ಕೆ ಬೇಕಾದ್ದು

ಹೆಸರು.....

ವಿಳಾಸ.....

ನಿಯಮಗಳು

ಪಕ್ಕದಲ್ಲಿ ಕೊಟ್ಟಿರುವ ಫಾರಂನಲ್ಲಾಗಲೀ ಅಥವಾ ಬೇರೆ ಸಾಧಾರಣ ಕಾಗದದಲ್ಲಾಗಲಿ ಉತ್ತರವನ್ನೂ ಹೆಸರು ವಿಳಾಸಗಳನ್ನೂ ಸ್ಪಷ್ಟವಾಗಿ ಬರೆದು ಕಳುಹಿಸಬೇಕು. ಪ್ರತಿ ಉತ್ತರಕ್ಕೂ ಪ್ರವೇಶ ಸುಲಕ್ಕಾಗಿ 4 ಒಂದೊಂದಾಣೆ ಪೋಸ್ಟಲ್ ಸ್ಟ್ಯಾಂಪು ಕಳುಹಿಸಬೇಕು.

ಉತ್ತರವನ್ನು 1936 ನೇ ಸೆಪ್ಟೆಂಬರ್ 25 ನೇ ತಾರೀಖಿನೊಳಗೆ ತಲುಪುವಂತೆ ಕಳುಹಿಸಬೇಕು. ಆ ತಾರೀಖಿನ ಅನಂತರ ಬರುವಕ್ಕೆ ಉತ್ತರಗಳನ್ನು ಗಣನೆಗೆ ತರುವುದಿಲ್ಲ. ಬೇಕಾದವರು ನಮ್ಮ ಆಫೀಸಿಗೆ ಆ ತಾರೀಖಿನೊಳಗೆ ತಂದುಕೊಡಬಹುದು.

50 ರೂ. ಗಳ ಮೊದಲನೇ ಬಹುಮಾನವು ಒಂದು ತಪ್ಪೂ ಇಲ್ಲದ ಉತ್ತರಕ್ಕೂ, 25 ರೂ. ಗಳ ಎರಡನೇ ಬಹುಮಾನವು ಒಂದು ತಪ್ಪಿರುವ ಉತ್ತರಕ್ಕೂ, 15 ರೂ. ಗಳ ಮೂರನೇ ಬಹುಮಾನವು ಎರಡು ತಪ್ಪಿರುವ ಉತ್ತರಕ್ಕೂ ಕೊಡಲಾಗುವುದು. ನಂತರ 10 ರೂ. ಬಾಳುವ ಬೆಳ್ಳಿಯ ಬಟ್ಟಲು ಮೊಟ್ಟನೊದಲು ನಮ್ಮ ಕೈ ಸೇರುವ ಸರಿಯಾದ ಉತ್ತರವನ್ನು ಕಳುಹಿಸಿದವರಿಗೆ ಸ್ಪೆಷಲ್ ಬಹುಮಾನವಾಗಿ ಕೊಡಲಾಗುವುದು.

ಮೈಸೂರಿನಲ್ಲಿರುವ ಕ್ವಿಲಾನ್ ಬ್ಯಾಂಕಿನಲ್ಲಿ ಇಟ್ಟಿರುವ ಉತ್ತರಕ್ಕೆ ಸರಿ ಹೋಲುವ ಉತ್ತರವೇ ಮೊದಲನೇ ಬಹುಮಾನಕ್ಕೆ ಅರ್ಹವಾದುದು. ಬಹುಮಾನಗಳಿಗೆ ಅರ್ಹವಾದ ಉತ್ತರಗಳು ಅನೇಕರಿಂದ ಬಂದಿಲ್ಲಿ ಬಹುಮಾನಗಳು ಅವರುಗಳಿಗೆ ಭಾಗಮಾಡಿ ಹಂಚಲಾಗುವುದು. ಉಮೇದುವಾರರ ಸಂಖ್ಯೆಗೆ ಅನುಗುಣವಾಗಿ ಬಹುಮಾನದ ಹಣವೂ ಹೆಚ್ಚುಕಡಿಮೆ ಮಾಡಲಾಗುತ್ತದೆ.

ಬ್ಯಾಂಕಿನಲ್ಲಿ "ಸೀಲ್" ಮಾಡಿ ಇಟ್ಟಿರುವ ಉತ್ತರವೂ ಬಹುಮಾನ ಪಡೆದವರ ಹೆಸರುಗಳೂ ಸಹ 1936 ನೇ ಸೆಪ್ಟೆಂಬರ್ 30 ನೇ ತಾರೀಖಿನ ಸತ್ಯವಾದಿ ವಾರಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಈ ಸ್ಪರ್ಧೆಯ ವಿಚಾರವಾಗಿ ಯಾವ ವಿಧವಾದ ಪತ್ರವ್ಯವಹಾರಮಾಡಲೀ ಅಥವಾ ಸ್ಪರ್ಧೆಯ ಅಧಿಕಾರಿಗಳೊಡನೆ ಭೇಟಿಯನ್ನಾಗಲೀ ಮಾಡಲಾಗುವುದಿಲ್ಲ.

ಸ್ಪರ್ಧೆಯ ಸಕಲ ವಿಷಯಗಳಲ್ಲೂ ಸಂಪಾದಕರ ತೀರ್ಮಾನವೇ ಕೊನೆ. ಉಮೇದುವಾರರೆಲ್ಲರೂ ಇವರ ತೀರ್ಮಾನಕ್ಕೆ ಬದ್ಧರಾಗಿರಬೇಕು.

ಉತ್ತರಗಳನ್ನು ಕಳುಹಿಸುವ ವಿಳಾಸ—

ಸಂಪಾದಕ, "ಸತ್ಯವಾದಿ ಸ್ಪರ್ಧೆ ಶಾಖೆ"
ಚಾಮರಾಜಪುರಂ, ಮೈಸೂರು.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore.